10-04-2000

ಮಂಜು ಮನೆ, ಬೆಂಗಳೂರು.

ವರದಾಚಾರ್ಯರು – ದೇವರ ಆಟ ಒಬ್ಬರಿಗೂ ಅರ್ಥವಾಗುವುದಿಲ್ಲಪ್ಪಾ. ಅದು ಹೇಗೆ ಕೆಲಸ ಮಾಡುತ್ತೀಯೋ ಏನೋ. ಏನು ಆಶ್ಚರ್ಯ, ಏನು ಆಶ್ಚರ್ಯ. ಅಬ್ಬಾ, ಅಬ್ಬಾ.

*****

ಮಂಜು ಮನೆ, ಬೆಂಗಳೂರು. 12-04-2000

ರಾಮಕೃಷ್ಣಾಶ್ರಮದಿಂದ ಬಂದ ಒಬ್ಬ ಸ್ವಾಮಿಗಳ ಜೊತೆ.

ಸ್ವಾಮಿಗಳು – ಪ್ರಚಾರ ಇಲ್ಲದೆ ಜನರಿಗೆ ಆಧ್ಯಾತ್ಮ ತಿಳಿಯೋದಾದ್ರು ಹೇಗೆ? ನಿಮಗೇನೂ ಬೇಕಿಲ್ಲದೇ ಇರಬಹುದು. ಹಸಿವಿರೋ ಜನ ಸುತ್ತಾ ಮುತ್ತಾ ಇದ್ದೇ ಇರ್ತಾರೆ ಅಲ್ಲಾ. ಅವರಿಗೆ ತಲ್ಪೋದಕ್ಕಾದ್ರೂ ಬೇಕಲ್ಲ ಪ್ರಚಾರ.

ಅಜ್ಜ – ಸತ್ಯವನ್ನು ತಿಳಿಲಿಕ್ಕೆ ಪ್ರಚಾರ ಅಗತ್ಯ ಉಂಟಾ? ಸತ್ಯ ಒಳಗೇ ಇರುವಂಥಾದ್ದು. ಅದನ್ನ ನಾವೇ ಕಂಡುಕೊಳ್ಳಬೇಕು.

ಸ್ವಾಮಿಗಳು – ತಿಳಿಲಿಕ್ಕೆ ಪ್ರಚಾರ ಬೇಕಿಲ್ಲ. ಆ ತಿಳಿಲಿಕ್ಕೆ ದಾರಿ ಬೇಕಲ್ಲ. ಅದಕ್ಕೆ ಮಹಾತ್ಮರ ದರ್ಶನ ಅನುಗ್ರಹ ಬೇಕಲ್ಲಾ.

ಅಜ್ಜ – ದಾರೀ ಕೂಡ ಒಳಗೇ ಇದೆ. ಅನುಗ್ರಹವೂ ಒಳಗೇ ಇರುವಂಥಾದ್ದು ಮತ್ತೆ ನೆಪ ಮಾತ್ರಕ್ಕೆ ಒಂದು ಬೇಕಾಕ್ತದೆ.

ಸ್ವಾಮಿಗಳು – ಹಾಂ.

ಅಜ್ಜ – ನೆಪಮಾತ್ರ ಒಂದು ಬೇಕು.

ಒಬ್ಬರು – ನನಗೆ ಅದು ಬೇಕು ಅನ್ನೋದೇ ದಾರಿ.

ಅಜ್ಜ – ದಾರಿ ತೋರಿಸುವವರು ಅನೇಕ ಜನ ಇದ್ದಾರೆ. ಆ ದಾರಿಯಲ್ಲಿ ಹೋಗುವವರು ಎಷ್ಟು ಜನ ಇದ್ದಾರೆ. ಆ್ಞಂ. ಅಲ್ವಾ.

ಒಬ್ಬರು – ನನಗೆ ಸತ್ಯ ಬೇಕು ಅನ್ನೋದೇ ದಾರಿ ಅಲ್ವಾ.

ಅಜ್ಜ – ಬೇಕು ಎಂಬುದು ಒಳಗೇ ಮೂಡಿ ಬರ್ಬೇಕು. ಅಲ್ಲಿ ಬಂದಾಗ ಅವನಿಗೆ ದಾರಿ ಕಾಣ್ತದೆ. ಪ್ರಚಾರ ಬೇಕು. ಆದ್ರೆ ಮೊದಲು ಕೃತಿಯಲ್ಲಿ ಬರ್ಬೇಕು. ಕೃತಿಯಲ್ಲಿ ಬರ್ಬೇಕಾದ್ರೆ ನಮ್ಗೆ ಒಳಗಿಂದ್ಲೇ ಆಗ್ಬೇಕು.

ಸ್ವಾಮಿಗಳು – ಅದರಲ್ಲಿ ಸಂಶಯವೇ ಇಲ್ಲ.

ಅಜ್ಜ – ಪ್ರಚಾರ ಅಂದ್ರೆ. ಅವರು ಹಾಗಿದ್ದಾರೆ. ಒಬ್ರು ಇದ್ದಾರೆ ಅಂತ್ಹೇಳಿ ಪ್ರಚಾರ ಅಷ್ಟೆ. ಇವ. ಇವ ಹೇಳೋದೇನು. ಅವ ಹಾಗಿದ್ದಾನೆ ಅಂತ್ಹೇಳಿ ಹೇಳೋದು ಮಾತ್ರ ಅಷ್ಟೆ.

ಸ್ವಾಮಿಗಳು – ಹೇಳುವವ ಅಷ್ಟರ ಮಟ್ಟಿಗೆ ಮಾಧ್ಯಮ ಅಷ್ಟೆ. ನಾಟಕದಲ್ಲಿ ಒಬ್ಬಬ್ಬರದ್ದು ಒಂದೊಂದು ಪಾತ್ರ ಅಲ್ವಾ.

ಅಜ್ಜ – ಅದೆಲ್ಲ ಸರಿ. ಆದ್ರೆ . . . ಹ. ಹ.

ಸ್ವಾಮಿಗಳು – ಎಲ್ರು ರಾಮನ ಪಾರ್ಟ್ ಎಲ್ಲಿ ಹಾಕ್ತಾರೆ. ಮೂಲತಃ ಎಲ್ಲ ಒಂದೇ ಅಂತ ಹೇಳಿದ್ರೂ ಅಭಿವ್ಯಕ್ತಿಯಲ್ಲಿ ಬೇರೆ ಬೇರೆ ಉಂಟಲ್ಲಾ.

ಅಜ್ಜ – ಇರಬಹುದು. ಇರಬಹುದು. . . . ಇರಲೇ ಬೇಕು. ಅ್ಹಂ.

ಸ್ವಾಮಿಗಳು – ಜನ ಸಾಮಾನ್ಯರಿಗೆ ಗೋಚರವಾಗೋದು ಅಭಿವ್ಯಕ್ತಿ ಮಾತ್ರ ತಾನೆ. ದಿವ್ಯ ದೃಷ್ಟಿ ಬರುವವರ್ಗು . . . ಶಾಸ್ತ್ರವು ಈ ಅಭಿವ್ಯಕ್ತಿನೇ ಅಲ್ಲ ಅಂತ ಎಷ್ಟೇ ಹೇಳಿದ್ರೂ. ಪ್ರತೀ ಸಲ ಮೋಸ ಹೋಕ್ತಾ ಇರ್ತಾರಲ್ಲ ಜನ. ಸಂಶಯಾತ್ಮಾ ವಿನಷ್ಯತಿ ಅಂತ ಹೇಳ್ತಾರಲ್ಲಾ.

ಅಜ್ಜ – ಹೌದಾ.

ಸ್ವಾಮಿಗಳು – ಹಾಂ. ಹೇಳ್ತಾರೆ. ಆದ್ರೆ ಎಲ್ಲಿವರೆಗೂ ಅಜ್ಞಾನ ಇರುತ್ತೋ ಅಲ್ಲಿವರೆಗೂ ಸಂಶಯ ತಪ್ಪಿದ್ದಲ್ಲ. ಹಾಗಂದ್ಬಿಟ್ಟು ಅವರ ಉದ್ಧಾರ ಹೇಗೆ?

ಅಜ್ಜ – ಸಂಶಯ ಹೋಗೋದ್ಯಾವಾಗ.

ಸ್ವಾಮಿಗಳು – ಜ್ಞಾನ ಉದಯವಾದಾಗ.

ಅಜ್ಜ – ಉದಯವಾಗ್ಲಿಕ್ಕೇನಾಗ್ಬೇಕು.

ಸ್ವಾಮಿಗಳು – ಅವನ ಪ್ರಯತ್ನ ಬೇಕು ಮೊದಲು.

ಅಜ್ಜ – ಮಾರ್ಗದರ್ಶಿಗಳು ಸಿಕ್ಕಿದ್ರೆ ಉದಯವಾಕ್ತದಾ?

ಸ್ವಾಮಿಗಳು – ಮಾರ್ಗದರ್ಶಿಗಳು ಸಿಕ್ಕಿದ್ರೂ ಕೂಡ, ಅವರ ವಾಕ್ಯದಲ್ಲಿ ಶ್ರದ್ಧೆ ಇಲ್ಲಾ ಅಂದ್ರೆ ಹೇಗಾಗತ್ತೆ.

ಅಜ್ಜ – ಶ್ರದ್ಧೆಗೆ ಗೀತೆ ಉಂಟಲ್ಲ. ನಮಗೆ ಕೃಷ್ಣ ಒಬ್ಬ ಮಾರ್ಗದರ್ಶಿ ಅಲ್ವಾ. ಗೀತೆ ಪ್ರತಿಯೊಬ್ರಿಗೂ ಬಾಯಿಪಾಠ ಬರ್ಬೋದು ಅಲ್ವಾ. ಆ ವಾಕ್ಯಗಳೆಲ್ಲ ಬರ್ಬೋದು ಅಲ್ವಾ. ಹಾಗಾದ್ರೆ ಅವರಿಗೆ ಎಷ್ಟರ ಮಟ್ಟಿಗೆ ಜ್ಞಾನೋದಯ ಆಗಿದೆ ಹಾಗಾದ್ರೆ.

ಸ್ವಾಮಿಗಳು – ಅದು ಗಿಣಿ ಪಾಠ.

ಅಜ್ಜ – ಹೌದು. ಹಾಗಾದ್ರೆ ನಮ್ಗೆ ಏನಾಗ್ಬೇಕು? ನಾವು ನಮ್ಮ ಒಳಗೆ ನೋಡ್ಬೇಕು. ಈ ಮಾರ್ಗದರ್ಶಿಯನ್ನ ನಮ್ಮ ಒಳಗೇ ಕಂಡುಕೊಳ್ಳಬೇಕು. ಬೇರೆ ನಿವೃತ್ತಿ ಸ್ಥಾನವೇ ಇಲ್ಲ. ನಮ್ಮೊಳಗೆ ನಾವು ಕಾಣಬೇಕು. ಕಂಡಾಗ ಆಮೇಲೆ ಒಬ್ಬ ಮಾರ್ಗದರ್ಶಿ ಸಿಕ್ಲಿಕ್ಕೂ ಸಾಕು. ಗುರುಗಳೇ ಎಲ್ಲ ಮಾಡ್ತಾರೆ ಅಂತಾದ್ರೆ, ಹಾಗಾದ್ರೆ ಇವ ಗುರು ಅಂತ್ಹೇಳಿ ಅವನನ್ನು ಹಿಡಿದು ಆಗಿದೆ ಅಲ್ಲಾ.

ಸ್ವಾಮಿಗಳು – ಹಿಡಿದಿಲ್ಲ. ಅವ ಹಿಡಿಬೇಕೂಂತ್ಹೇಳಿ ಹೋಗಿದಾನೆ. ಆದರೆ ಇವನ ಸಂಸ್ಕಾರ ಬಲದಿಂದ, ಅಂಥಾ ಶ್ರದ್ಧೆ ಮಾಡಿಲ್ಲ ಗುರುಗಳಲ್ಲಿ, ಟೆಸ್ಟ್ ಮಾಡಿ ತಗೋಬೇಕು ಅಂತ ನಮ್ಮ ಸಯನ್ಸ್ ಹೇಳುತ್ತೆ. ಯಾವುದನ್ನು ಟೆಸ್ಟ್ ಮಾಡದೆ ಏನನ್ನೂ ಸ್ವೀಕರಿಸಬಾರದು ಅಂತ ಸೈನ್ಟಿಫಿಕ್ ಅಪ್ರೋಚ್. ಆದ್ರಿಂದ ಈ ಗುರುಗಳನ್ನ ಟೆಸ್ಟ್ ಮಾಡೋದು ಹ್ಯಾಗೆ? ಎಲ್ರೂ ಅವರ ಬಾಹ್ಯಾಚರಣೆಯನ್ನೇ ನೋಡ್ತಾ ಇರ್ತಾರೆ. ಮಹಾತ್ಮರ ಬಾಹ್ಯಾಚರಣೆ ಬಹಳ ಕನ್ಃಫ್ಯೂಸ್ ಮಾಡತ್ತೆ. ಅವರು ಯಾವ ಸ್ಥಿತಿಯಲ್ಲಿರ್ತಾರೆ, ಹೇಗೆ ವರ್ತಿಸ್ತಾರೆ ಅನ್ನೋದು ಇವರಿಗೆ ಹೇಗೆ ಇವರಿಗೆ ತಿಳೀಲಿಕ್ಕೆ ಸಾಧ್ಯ.

ಅಜ್ಜ – ಅದು ಸಿಕ್ಕಬೇಕಾದ್ರೆ ಇವನು ಅಂಥಹ ಅರ್ಹತೆಯನ್ನು ಪಡ್ದವನಾಗಿರ್ಬೇಕು. ಬೇರೆ ನಿವೃತ್ತಿಸ್ಥಾನವೇ ಇಲ್ಲ.

ಸ್ವಾಮಿಗಳು – ಹ. ಹ. ಹ. ಹೌದು ಹಾಗಿದ್ರೆ ಎಲ್ಲಾ ಅರ್ಹತೆಯನ್ನೇ ನೆಚ್ಚಿಕೊಂಡಿದೆ.

ಅಜ್ಜ – ಹೌದು.

ಸ್ವಾಮಿಗಳು – ಸ್ವಾಮಿ ವಿವೇಕಾನಂದ್ರು ಹೇಳ್ತಾರೆ, ನಿನ್ನ ಯೋಗ್ಯತೆಗೆ ತಕ್ಕಂತೆ ನಿನಗೆ ಸಿಕ್ಕತ್ತೆ ಅಂತ.

ಅಜ್ಜ – ಅಲ್ಲವಾ, ಅಲ್ಲವಾ.

ಸ್ವಾಮಿಗಳು – ನಾವು ಯಾರನ್ನು ದೋಷಿಸುವುದು, ಯಾರನ್ನ ಬೈಯ್ಯುವುದು. ಎಷ್ಟು ಮಾಡಿದ್ರೂ ಪ್ರಯೋಜನವಿಲ್ಲ. ಹಾಗಾದ್ರೆ ನಮ್ಮ ಯೋಗ್ಯತೆಗೆ ತಕ್ಕ ಹಾಗೆ ಸಿಗುತ್ತೆ ಅಂತಾದ್ರಿಂದ.

ಅಜ್ಜ – ಅದೇನು ಅಷ್ಟು ಸುಲಭವ.

ಸ್ವಾಮಿಗಳು – ಪ್ರಯತ್ನ ಮಾಡ್ತಾ ಇರಬೇಕು ಪ್ರಾಮಾಣಿಕವಾಗಿ ನಮ್ಮ ಯೋಗ್ಯತೆಗೆ ತಕ್ಕ ಹಾಗೆ ಸಿಕ್ಕೋ ಹಾಗಿದ್ರೆ. ನಮ್ಮ ಯೋಗ್ಯತೆಯ ಒಳಗಡೆ ನೀವು ಪ್ರೇರೇಪಣೆ ಸಿಕ್ಕಿ ಅದೇ ಮುಂದುವರಿತಾ ಹೋಗುವುದು ಅಷ್ಟೇ. ಪ್ರಯತ್ನ ಮಾಡ್ತಾ ಮಾಡ್ತಾ ದೇವರ ಮೇಲೆ ಭಾರ ಹಾಕಿ.

ಅಜ್ಜ – ಅದೂ ಕೂಡ ನಮ್ಮ ಒಳಗೇ ಉಂಟು. ಯಾವುದು? ಆ ಪ್ರೇರಣೆ ಬರ್ಲಿಕ್ಕೆ ಕೂಡ ಒಳಗೇ ನೋಡಬೇಕು. ಕೃಷ್ಣ ಏನು ಹೇಳಿದ್ದಾನೆ. ಪ್ರತಿಯೊಂದು ದೇಹದಲ್ಲಿರುವವನು ನಾನು ಅಂತ. ಇದರಲ್ಲಿ ನಮಗೆ ಎಷ್ಟು ವಿಶ್ವಾಸ ಉಂಟು. ಒಳಗೇ ಇದ್ದಾನೆ ಅಂತ್ಹೇಳಿ ಹೇಳಿದ್ದಾನೆ. ಹೊರಗೆ ಒಂದು ನೆಪ ಮಾತ್ರಕ್ಕೆ ಅಂತ್ಹೇಳ್ತಾನೆ ಅವ. ಯಾವುದು? ನೆಪಕ್ಕೊಬ್ಬ ಬೇಕಲ್ಲ. ಅದು ಹೊರಗೆ ಉಂಟು. ಈ ಪರಮಹಂಸರಿಂದ ಸಿಕ್ಕಿದ್ದು ವಿವೇಕಾನಂದರಿಗೊಬ್ಬರಿಗೆ ಮತ್ತು ಕೆಲವು ಜನ್ರಿಗೆ ಅಲ್ವಾ. ಬಾಕಿ ಎಷ್ಟೋ ಜನ್ರಿರಲಿಲ್ವಾ. ಅವರಿಗೆ ಎನು ಆಗ್ಲಿಲ್ಲ ಏಕೆ.

ಒಬ್ಬರು – ಜೊತೆಯಲ್ಲಿದ್ರೂ ಏನಾಗ್ಲಿಲ್ಲ.

ಅಜ್ಜ – ಹೌದು ಜೊತೆಯಲ್ಲಿದ್ದವ್ರಿಗೂ ಏನಾಗ್ಲಿಲ್ಲ. ದೂರದಲ್ಲಿದ್ದವ್ರಿಗೆ ಬಂದವ್ರಿಗೆ ಆಗಿದೆ. ಹಾಗಾದ್ರೆ ಅವನಲ್ಲಿತ್ತು. ಕೆಲವು ಜನ್ರು ಹೇಳ್ತಾರೆ ಪರಮಹಂಸರು ವಿವೇಕಾನಂದರಿಗೆ ಏನೋ ಒಂದನ್ನು . . . ಶಬ್ದಗಳು ಬರೋದಿಲ್ಲ ನಮಗೆ ಏನಪ್ಪ ಹೇಳಿ ಯಾರಾದ್ರು.

ಒಬ್ಬರು – ಅನುಗ್ರಹ.

ಅಜ್ಜ – ಹಾಂ. ಅನುಗ್ರಹ ಮಾಡಿದ್ರು ಕೊಟ್ಟರು ಅಂತ್ಹೇಳಿ. ಆದ್ರೆ ನಾವು ಹೇಳ್ತೇವೆ ಅವ್ರು ಕೊಟ್ಟದ್ದಲ್ಲ. ಇವ ಪಡಕೊಂಡ ಅಂತ್ಹೇಳಿ. ರಾಮಕೃಷ್ಣ ಪರಮಹಂಸರು ಕೊಟ್ಟದ್ದಲ್ಲ. ಕೊಟ್ಟದ್ದಾಗಿದ್ರೆ ಅವ್ರು ಸಾವಿರ ಜನ್ರಿಗೆ ಕೊಡ್ಬೇಕಿತ್ತು. ಕೊಡ್ಲಿಲ್ಲ. ಅವ್ರು ಕೊಟ್ಟದ್ದು ಒಬ್ರಿಗೆ ಅಥವಾ ಒಂದೆರಡು ಜನ್ರಿಗೆ. ಅದು ಅವ ಪಡಕೊಂಡ. ಅವನಲ್ಲಿ ಅರ್ಹತೆ ಇತ್ತು. ಆದ್ರಿಂದ ಅವ ಪಡ್ಕೊಂಡ ಅಲ್ವಾ.

ಸ್ವಾಮಿಗಳು – ಹೌದು ಹೌದು.

ಅಜ್ಜ – ಹಾಗೆ ಯಾರಿಗೆ ಅರ್ಹತೆ ಉಂಟೋ ಅವರಿಗೆ ಪ್ರಪಂಚದಲ್ಲಿ ಸಿಕ್ತದೆ. ದಾರಿ ಹುಡುಕುವವರೂ ಇದ್ದಾರೆ, ದಾರಿ ತೋರಿಸುವವರೂ ಇದ್ದಾರೆ. ಇವ ನಿಜವಾಗಿ ಹುಡುಕುವವ ಅರ್ಹತೆ ಪಟ್ಟವನಾಗಿರ್ಬೇಕು. ಮಾರ್ಗದಲ್ಲಿ ಒಂದು ಬೋರ್ಡ್ ಉಂಟು, ಅವ ನೋಡ್ತಾನೆ ಹಾಗೆ ಇವ ಅಲ್ಲಿ ನಿಶ್ಚಯ ಮಾಡಿಕೊಂಡೇ ಇದ್ದಾನೆ ಅಲ್ಲಿ. ಅವ ಹೋಗುವವನು ನೋಡ್ತಾನೆ ಅಲ್ಲಿ ಹೋ ಆಯ್ತು ಅಲ್ಲಿ ಕೆಲಸ. ಹಾಗಾದ್ರೆ ಇವನ ಕೈಯಲ್ಲುಂಟು ಒಟ್ಟಾರೆ. ಇದಕ್ಕೆಲ್ಲ ಆಧಾರಗಳಿರಬೇಕು. ಅದು ನಮಗೆ ಹೇಳ್ಳಿಕ್ಕೆ ಬರೋದಿಲ್ಲ. ಯಾವ್ದಪ್ಪ ಆ ಶ್ಲೋಕಗಳೋ ಮಂತ್ರಗಳೋ ಎಂಥದ್ದದು. ಯಾರು ಅರ್ಹತೆಯನ್ನು ಪಡೆದವ ಅಂತ್ಹೇಳಿ ಈಗ. ನಮ್ಗೆ ಹಸಿವೆ ಆಗ್ಬೇಕು. ನಾವು ಹೋಗಿ ಊಟ ಕೊಡ್ಬೇಕು

ಅಂತ್ಹೇಳಿ ಒಬ್ಬನಲ್ಲಿ ಕೇಳೋದ್ಬೇಡ. ಕೊಡುವವನಿಗೆ ಗೊತ್ತುಂಟು, ಇವನಿಗೆ ಹಸಿವೆ ಆಗ್ಯದೋ ಇಲ್ವೋ ಅಂತ್ಹೇಳಿ. ಅವ್ನು ಕಂಡ್ಬಿಡೀತಾನೆ ಇವನನ್ನು. ನಿಜವಾಗಿ ಇವ್ನಲ್ಲಿ ಹಸಿವೆ ಆದ್ರೆ, ಬೊಬ್ಬೆ ಹಾಕ್ಬೇಕು ಅಂತ್ಹೇಳಿ ಇಲ್ಲ. ಅವನು ನೋಡಿ, ಬಂದು, ಊಟವನ್ನು ಇವನಿಗೆ ಕೊಡ್ತಾನೆ. ಹಸಿವೆ ಆಗ್ದಿದ್ರೆ ಅವ ಎಷ್ಟು ಹೋಗಿ ಬೊಬ್ಬೆ ಹಾಕಿದ್ರೂ, ಅವನಲ್ಲಿ ಊಟ ತಯಾರಿದ್ರೂ ಕೂಡ, ಅವ ಹೋಗು ನಡೀ ಅಂತ್ಹೇಳಿ ತಿರಸ್ಕಾರ ಮಾಡಿ ಬಿಡ್ತಾನೆ. ಕೊಡೋದಿಲ್ಲ ಊಟ. ಯಾಕೆ? ಆ್ಞಂ. ಅವನಲ್ಲಿ ಏನುಂಟು ಅಂತ ಪರೀಕ್ಷೆ ಮಾಡ್ಲಿಕ್ಕೆ ಹೋಗುವವರೂ ಇದ್ದಾರೆ. ಹಾಗಾಗಿ ಇವ ಕಂಪ್ಲೀಟ್ ಕಂಗಾಲಾಗ್ಬೇಕು. ಟೈಂ ಎಷ್ಟಪ್ಪ.

ಸ್ವಾಮಿಗಳು – ಭಜನೆ ಸ್ವಲ್ಪ ಮಾಡೋಣ್ವ.

ಅಜ್ಜ – ಹಾಂ. ನಾವು ಕಾಯ್ತಾ ಇದ್ದೇವೆ.

ಸ್ವಾಮಿಗಳು – ಶರಣಾಗು ಶರಣಾಗು ಶರಣಾಗು ಮನವೆ
ಶ್ರೀ ಗುರುಚರಣಸರೋಜಕೆ ಮಣಿದು
ಶರಣಾಗು ಶರಣಾಗು ಶರಣಾಗು ಮನವೆ – ಹಾಡಿದರು.

*****